KARNATAKA SANGHA QATAR

# ಶ್ರೀಗಂಧ

## ಯುಗಾದಿ ವಿಶೇಷಾಂಕ ೨೦೦೪



Ambassador

भारतीय राजदूतावास
السفارة الهندية
EMBASSY OF INDIA
P.O.Box 2788, DOHA- QATAR
Tel.:(974)4672025,Fax:4670448
E-Mail: ambassor@qatar.net.qa
: indembdh@qatar.net.qa
Website: www.indianembassy.gov.qa



1[st] April, 2004

## MESSAGE

It gives me great pleasure to convey a message of felicitations and good wishes for the Annual Day souvenir of the Karnataka Sangha being published on the occasion of UGADI – the New Year celebrations.

A new year is always an occasion for reflection and renewal. The Karnataka Sangha can look back with satisfaction at a very successful year filled with cultural, sporting and educational activity. Such purposeful activities help cohesion in the community and build good relationships with friends from other parts of India as well as from Qatar. I am confident the Karnataka Sangha will continue to play a vibrant role in the years to come.

With good wishes for the Annual Day function and the New Year.

(Ranjan Mathai)

*Gita Mathai*



1st April, 2004

## MESSAGE

A New Year celebration is always an occasion for happiness and looking to the future with confidence. I am delighted that the Karnataka Sangha, particularly the ladies wing "PRAGATHI" and the children's group "TEJUS' have carried out a number of useful activities in the field of sports, culture, education and charity during the year gone by. Such activities promote community spirit and greater friendships within the community living here in Qatar. Please keep up the good work.

With every good wish for UGADI and the year ahead.

Gita Mathai

(Mrs. Gita Mathai)



# ಅಧ್ಯಕ್ಷರ ನುಡಿ

ನಲ್ಮೆಯ ಬಂಧುಗಳೇ

ಹೊಸ ವರ್ಷದ ಆಗಮನವನ್ನು ಯುಗಾದಿ ಹಬ್ಬದ ಆಚರಣೆಯೊಂದಿಗೆ ಸಂಭ್ರಮಿಸುವ ಮಹತ್ವದ ಗಳಿಗೆ, ಆನಂದ ಕರ್ನಾಟಕದ ಜನತೆಗೆ ಒದಗಿದೆ.

ನಮ್ಮಲ್ಲಿ ಬಹಳ ಮಂದಿ, ಈ ರೀತಿ ಯೋಚಿಸುತ್ತಾರೆ. ಅದೇನೆಂದರೆ ಮಾನವನಾಗಿ ಹುಟ್ಟಿದ ಮೇಲೆ, ಅಪ್ಪಟ ಪ್ರೇಮ, ಭಕ್ತಿ-ಭಾವ, ಭಗವಂತನ ಸಾಕ್ಷಾತ್ಕಾರ ಇವುಗಳನ್ನು ಅರಸುತ್ತ ಅನುಭವಿಸುವುದು ಮುಖ್ಯವಾಗಿ ಬಿಡುತ್ತದೆ. ಆದರೆ ಅದು ನಿಜಕ್ಕೂ ತದ್ವಿರುದ್ಧ. ಭಕ್ತಿ-ಭಾವದ ಮೂರ್ತನಾಗಿ ಜನ್ಮ ತಳೆದ ಮೇಲೆ ಉತ್ತಮ ಮಾನವರಾಗಿ ಬಾಳಬೇಕಾಗಿರುವುದೇ ಕಟು ಸತ್ಯ.

ಅದೇನೆ ಇರಲಿ, ಕರ್ನಾಟಕ ಸಂಘ, ಕತಾರ್ ಉದಯಿಸಿ ಕೆಲವೇ ಕೆಲವು ವರ್ಷಗಳು ಸರಿದಿದೆ. ಸಂಘದ ಅಂಗವಾಗಿ ಪ್ರಗತಿ, ತೇಜಸ್ ಕವಲೊಡೆದು ಯಶಸ್ಸಿನ ದಾಪುಗಾಲಿಟ್ಟು ಸಂಘದಲ್ಲಿ ದೈಹಿಕ, ಮಾನಸಿಕ ನೀತಿಭೋಧ ಕಾರ್ಯಕ್ರಮಗಳು ನಡೆದಿವೆ. ಅವು ಕ್ರೀಡಾ ಕೂಟ, ಪಿಕ್‌ನಿಕ್ ಪ್ರವಾಸಗಳೆರಬಹುದು, ಕಸ್ತೂರಿ ಗ್ರಂಥಾಲಯವಿರಬಹುದು, ಕ್ವಿಜ್ ಸ್ಪರ್ಧೆಗಳಲ್ಲಿ ಭಾಗವಹಿಸುವುದಿರಬಹುದು, ಕಾರ್ಮಿಕ ಸ್ಥಿತಿ-ಗತಿಗಳಿಗೆ ಸ್ಪಂದಿಸುವುದಿರಬಹುದು, ಮೇಲ್ನೋಟದಲ್ಲೇ ನಮ್ಮ ಕಾರ್ಯಕ್ರಮಗಳು ಇದನ್ನು ಸಾದರ ಪಡಿಸುತ್ತವೆ.

ಸಂಘದ ಯಶಸ್ಸಿನಲ್ಲಿ ಒಂದುರೀತಿಯ ಸೌಹಾರ್ದತೆ, ಅಳತೆ ತಪ್ಪದೇ ಕಾರ್ಯ ನಿರ್ವಹಿಸುವಿಕೆಯಲ್ಲಿ ಮೇಲೆ ತಿಳಿಸಿದ ಚೌಕಟ್ಟೇ ಕಾರಣ. ಇದು ಸಂಘದ ಪದಾಧಿಕಾರಿಗಳ ಮತ್ತು ಸದಸ್ಯರುಗಳ ನಿಃಸ್ವಾರ್ಥ ಸೇವೆಯ ಪ್ರತಿಫಲ.

ಬನ್ನಿ..., ಈ ಹೊಸ ವರ್ಷದ ಆರಂಭದಲ್ಲಿ ನಾವೆಲ್ಲಾ ಸೇರಿ ಸಂಘವನ್ನು ಇನ್ನಷ್ಟು ಬೆಳೆಸೋಣ. ಮಾದರಿಯ ಕಾರ್ಯಕ್ರಮಗಳನ್ನು ನೀಡೋಣ. ಒಗ್ಗಟ್ಟಿನೊಂದಿಗೆ ಸೌಹಾರ್ದತೆಯ ವಾತಾವರಣವನ್ನು ನಿರ್ಮಿಸೋಣ.

ಕೊನೆಯದಾಗಿ, ಹೊಸ ವರುಷದ ಹಾರ್ದಿಕ ಶುಭಾಶಯಗಳನ್ನು ಕೋರಿ, ಸರ್ವರಿಗೂ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ.

ಪ್ರಕಾಶ್ ಬಾಬು
ಅಧ್ಯಕ್ಷರು
ಕರ್ನಾಟಕ ಸಂಘ
ಅಂಚೆ ಪೆಟ್ಟಿಗೆ ಸಂಖ್ಯೆ : ೩೦೭೩೨
ದೋಹಾ, ಕತಾರ್.



# ಸಂಪಾದಕೀಯ...

ನಲ್ಮೆಯ ಕನ್ನಡ ಬಾಂಧವರೆ,

ವಸಂತ ಬಂದ ಋತುಗಳ ರಾಜ ತಾ ಬಂದ ಚಿಗುರನು ತಂದ.., ವಸಂತ ಮಾಸ ಶೃಂಗಾರ ಮಾಸ.., ಹೀಗೆ ಕವಿಗಳು ವಸಂತ ಮಾಸವನ್ನು ಹಲವು ರೀತಿಯಲ್ಲಿ ಬಣ್ಣಿಸಿದ್ದಾರೆ. ವಸಂತ ಋತು, ಋತುಗಳ ರಾಜ. ಮಾಗಿಯ ಚಳಿಗೆ ಮುದುಡಿ ಎಲೆಗಳು ಉದುರಿದ ಒಣ ಗಿಡ-ಮರಗಳಲ್ಲಿ ಎಳೆ ಚಿಗುರು ಬಂದು, ಎಲ್ಲೆಡೆ ತಿಳಿಹಸುರು ಬಣ್ಣ ಕಣ್ಮನಗಳನ್ನು ಸೆಳೆಯುತ್ತದೆ. ಶಿಶಿರದ ಚಳಿಯಿಂದ ಮುದುಡಿದ ಮನಸ್ಸಿಗೆ ಈ ಹೊಸ ಚಿಗುರು ನೀಡುವ ಚೇತನ ವರ್ಣಿಸಲಸಾಧ್ಯ. ಈ ಹೊಸ ಚಿಗುರಿನ ಮಧ್ಯೆ ಮಾಮರದಿ ಕೋಗಿಲೆಗಳು ಇಂಪಾಗಿ ಹಾಡಿ ವಸಂತನನ್ನು ಸ್ವಾಗತಿಸುತ್ತದೆ.

ಹೊಸ ಚಿಗುರಿನೊಂದಿಗೆ ಪ್ರಕೃತಿಯಲ್ಲಿ ಎಲ್ಲೆಡೆ ಚೈತ್ರದ ನವೋತ್ಸಾಹ ಚಿಮ್ಮುತ್ತದೆ. ಮಾನವನಲ್ಲೂ ನೋವನ್ನು ಮರೆಸಿ, ಸಂತಸದ ಹೊನಲನ್ನು ಚಿಮ್ಮಿಸುವ ಶಕ್ತಿ ಪ್ರಕೃತಿಯ ಚೈತ್ರ ಚಿಗುರಿನಲ್ಲಿದೆ. ಹೀಗೆ ಪ್ರಕೃತಿಯು ಹಸಿರಿನಿಂದ ತುಂಬಿ ಹೊಸ ಕಳೆಯನ್ನು ಪಡೆದು, ಇಡೀ ವಿಶ್ವವೇ ಹಬ್ಬಕ್ಕಾಗಿ ಸಿಧ್ಧಗೊಂಡಿದಿಯೋ ಎಂಬಂತೆ ಇರುವಾಗಲೇ ಯುಗಾದಿಯ ಆಗಮನ. ಪ್ರಕೃತಿಯು ಹಸಿರು ಸೀರೆ ಉಟ್ಟು, ವಿವಿದ ಕುಸುಮಗಳು ಅರಳುವ ಈ ಚೈತ್ರ ಮಾಸದ ಮೊದಲನೇ ದಿನವೇ ಯುಗಾದಿ ಹಬ್ಬ.

ಯುಗದ ಆದಿ ಎಂದರೆ ನೂತನ ವರ್ಷಾರಂಭ. ಕನ್ನಡದ ಜನತೆಗೆ ಯುಗಾದಿಯ ದಿನದಿಂದ ಹೊಸ ಸಂವತ್ಸರ ಆರಂಭವಾಗುತ್ತದೆ. ಮನುಷ್ಯನ ಜೀವನದಲ್ಲಿ ಸುಖ ದುಃಖಗಳು ಯಾವಾಗಲೂ ಜತೆಯಾಗಿಯೇ ಬರುತ್ತವೆ. ಆದ್ದರಿಂದ ಮುಂಬರುವ ವರ್ಷದಲ್ಲಿ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸೋಣ ಎಂಬ ಸಂದೇಶದ ಸಂಕೇತವೇ ಯುಗಾದಿಯಂದು ನಾವು ಸೇವಿಸುವ ಬೇವು ಬೆಲ್ಲದ ಸೇವನೆ.

ಹೀಗೆ ಮನುಷ್ಯನ ಬಾಳಿನಲ್ಲಿ ಸುಖ ದುಃಖಗಳನ್ನು ಸಮಾನವಾಗಿ ತರುವ ಈ ಯುಗಾದಿ, ನಮ್ಮ ಕನ್ನಡದ ಬಾಂಧವರಿಗೆಲ್ಲರಿಗೂ ಈ ಶ್ರೀ ತಾರಣ ಸಂವತ್ಸರದಲ್ಲಿ ಬೇವಿನ ಕಹಿಗಿಂತ ಬೆಲ್ಲದ ಸಿಹಿಯನ್ನೇ ಹೆಚ್ಚಾಗಿ ತರಲಿ ಎಂದು ಆಶಿಸುತ್ತೇನೆ.

ತಮ್ಮೆಲ್ಲರ ವಿಶ್ವಾಸಿ
ಸುಮ ಆರ್ ಚಂದಿರ್
ಸಂಪಾದಕರು

**ಕರ್ನಾಟಕ ಸಂಘ, ಕನ್ನಡ ಹೊಸ ವರ್ಷ ಯುಗಾದಿಯ ಆಚರಣೆಯ ಸಂದರ್ಭದಲ್ಲಿ "ಶ್ರೀಗಂಧ" ಯುಗಾದಿ ವಿಶೇಷಾಂಕವನ್ನು ಹೊರತರಬೇಕೆಂದು ತೀರ್ಮಾನಿಸಿದ ನಂತರ ಅದರ ಬಿಡುಗಡೆಗಾಗಿ ಸಂಘದ ಸದಸ್ಯರೆಲ್ಲರು ಬಹಳ ದುಡಿದಿದ್ದಾರೆ. ಜಾಹಿರಾತುಗಳನ್ನು ಒದಗಿಸಲು ಕಾರ್ಯಕಾರಿ ಸದಸ್ಯರು ಹಗಲಿರುಳು ಶ್ರಮಿಸಿದ್ದಾರೆ. ಅವರೆಲ್ಲರ ಸಹಕಾರದಿಂದ ಈಗ ಶ್ರೀ ಗಂಧ ನಿಮ್ಮ ಮುಂದಿದೆ. ಜಾಹಿರಾತುಗಳನ್ನು ಸಕಾಲಕ್ಕೆ ಒದಗಿಸಿದ ಸದಸ್ಯರಿಗೆ ಹಾಗು ಜಾಹಿರಾತು ನೀಡಿದ ಸಂಸ್ಥೆಗಳಿಗೆ ನಾವು ಆಭಾರಿಗಳು. ಶ್ರೀ ಮಧು, ಶ್ರೀ ಪ್ರಭಾಕರ್ ಮತ್ತು ಶ್ರೀಮತಿ ಸುಧಾ ಅವರುಗಳು ನೀಡಿದ ಸಹಕಾರಕ್ಕೆ ವಂದನೆಗಳು.**

**ಈ ಬಾರಿ ಸಂಚಿಕೆಗೆ ಸಾಕಷ್ಟು ಲೇಖನಗಳು, ಕವನಗಳು ಬಂದಿವೆ. ಆಯ್ದ ಕೆಲವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಸ್ಥಳಾಭಾವದಿಂದ ಪ್ರಕಟಿಸಲಾಗದೇ ಉಳಿದವುಗಳನ್ನು ನಮ್ಮ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.**

**ದಯವಿಟ್ಟು ಸಂಚಿಕೆ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆದು ತಿಳಿಸಿ.**

# ಕರ್ನಾಟಕ ಸಂಘ, ಕತಾರ್

## ಆಡಳಿತ ಮಂಡಳಿ ೨೦೦೩–೨೦೦೪



ಪ್ರಕಾಶ್ ಬಾಬು
ಅಧ್ಯಕ್ಷರು



ಪ್ರಭಾಕರ ಕೆ
ಉಪಾಧ್ಯಕ್ಷರು



ಅಂಬಾ ಪ್ರಸಾದ್ ಎಂ ಎನ್
ಕಾರ್ಯದರ್ಶಿ



ಶ್ಯಾಂ ಸುಂದರ್
ಜಂಟಿ ಕಾರ್ಯದರ್ಶಿ



ನಾಗೇಶ್ ರಾವ್
ಖಜಾಂಚಿ



ದಿನೇಶ್ ಗೌಡ
ಕ್ರೀಡಾ ಕಾರ್ಯದರ್ಶಿ



ಅರವಿಂದ ಪಾಟೀಲ್
ಸಾಸ್ಕೃತಿಕ ಕಾರ್ಯದರ್ಶಿ



ಅರುಣ್ ಕುಮಾರ್
ಜಂಟಿ ಸಾಂಸ್ಕೃತಿಕ ಕಾರ್ಯದರ್ಶಿ



ರವಿ ಗೋಪಿನಾಥ್
ಜಂಟಿ ಸಾಂಸ್ಕೃತಿಕ ಕಾರ್ಯದರ್ಶಿ

# ಕಾರ್ಯಕಾರಿ ಸದಸ್ಯರು


ವೆಂಕಟೇಶ್ ಮೂರ್ತಿ


ಪ್ರಕಾಶ್ ಮೂರ್ತಿ


ಸೂರ್ಯನಾರಯಣ


ಶ್ಯಾಂ ಎನ್ ಸ್ವಾಮಿ


ವಿಮಲ ಪ್ರಕಾಶ್


ಸುಮ ಆರ್ ಚಂದಿರ್

# ಸಲಹಾ ಸಮಿತಿ ಸದ


ಎ ಎನ್ ನಾಗರಾಜ್


ವಿಕ್ರಾಂತ್ ಪಾಟಿಲ್


ಜಾವೇದ್ ಖಾನ್


ಹೆಚ್ ಕೆ ಮಧು



ವಿಮಲ ಪ್ರಕಾಶ್
ಅಧ್ಯಕ್ಷರು



ಎ ಎನ್ ಭುವನ ನಾಗರಾಜ್
ಉಪಾಧ್ಯಕ್ಷರು



ಸುಮ ಆರ್ ಚಂದಿರ್
ಕಾರ್ಯದರ್ಶಿ



ಅಖಿಲ ನಾಗರಾಜ್
ಖಜಾಂಚಿ



ಶಿಲ್ಪ ಮನ್ನಂಗಿ
ಜಂಟಿ ಖಜಾಂಚಿ



ಜಾನಕಿ ರವಿ
ಸಾಂಸ್ಕೃತಿಕ ಕಾರ್ಯದರ್ಶಿ



ಅನಿತ ಶ್ಯಾಂ
ಸದಸ್ಯರು



ಪೂರ್ಣಿಮ ಪ್ರಕಾಶ್
ಸದಸ್ಯರು



ಸಂಗೀತ ಚಂದ್ರಕಾಂತ್
ಸದಸ್ಯರು



ಸರಸ್ವತಿ ರವಿ
ಸದಸ್ಯರು

## ಕರ್ನಾಟಕ ಸಂಘ ಮಕ್ಕಳ ವಿಭಾಗ
### ಆಡಳಿತ ಮಂಡಳಿ



ರೇಶ್ಮ ರವಿಕಾಂತ್
ಅಧ್ಯಕ್ಷರು



ಸುಹಾಸ್
ಕಾರ್ಯದರ್ಶಿ



ಸಾವನ್ ವಿ ರಾವ್
ಖಜಾಂಚಿ



ಸಮರ್ಥ್ ವಿ ರಾವ್
ಸದಸ್ಯರು



ಅಶ್ವಿನಿ ನಾಗರಾಜ್
ಸದಸ್ಯರು



ಆಶಿಶ್ ಎನ್ ರಾವ್
ಸದಸ್ಯರು